ಡಾ. ಉಷಾದೇವಿ ಉದಯ ಹಿರೇಮಠ

# ವಚನೋದ್ಯಾನ ಸಾಂಸ್ಕೃತಿಕ ಅಧ್ಯಯನ



Scanned with OKEN Scanner

# ವಚನೋದ್ಯಾನ : ಸಾಂಸ್ಕೃತಿಕ ಅಧ್ಯಯನ

ಡಾ. ಉಷಾದೇವಿ ಉದಯ ಹಿರೇಮಠ

ನಯನ ಪ್ರಕಾಶನ
ಮೈಸೂರು

Scanned with OKEN Scanner



"ನಿನ್ನ ಸಾಧನೆ ಸಿದ್ಧಿಯಿಂದ ನೀನು
ಏನಾದರೂ ಸರಿಯೆ
ಮೊದಲು ಮಾನವನಾಗು"

ಎಂದು ಸರ್ವಕಾಲಿಕ ಸಂದೇಶವನ್ನು ನೀಡಿದವರು ಡಾ.ಸಿದ್ಧಯ್ಯ ಪುರಾಣಿಕರವರು. ಸ್ವಾತಂತ್ರ್ಯ ಪೂರ್ವ ಭಾರತದಲ್ಲಿ ಹೈದರಾಬಾದ ನಿಜಾಮನ ಸಂಸ್ಥಾನದಲ್ಲಿ ಶತಮಾನಗಳ ಕಾಲ ತೀವ್ರ ಶೋಷಣೆಗೆ ಒಳಗಾದ ಮತ್ತು ಇಂದಿಗೂ ಅಭಿವೃದ್ಧಿ ವಂಚಿತ ಗ್ರಾಮಗಳಲ್ಲಿ ಒಂದಾಗಿರುವ ಕೊಪ್ಪಳ ಜಿಲ್ಲೆಯ, ಕುಕನೂರು ತಾಲೂಕಿನ, ದ್ಯಾಂಪುರದಲ್ಲಿ ಜನಿಸಿದ ಇವರು, ತಮ್ಮ ಸಾಧನೆ ಸಿದ್ಧಿಯಿಂದ, ರಾಷ್ಟ್ರಮಟ್ಟದಲ್ಲಿ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ನಾಡು–ನುಡಿಗೆ ಗೌರವವನ್ನು ತಂದವರು. ಏನಗಿಂತ ಕಿರಿಯರಿಲ್ಲ ಎನ್ನುವಂತೆ ಸರಳಜೀವನ, ಉದಾತ್ತ ಚಿಂತನದ ಬದುಕು ಇವರದಾಗಿತ್ತು. ನಾಡು ಕಂಡ ಅತ್ಯಂತ ದಕ್ಷ ಆಡಳಿತಗಾರರಲ್ಲಿ ಒಬ್ಬರಾಗಿ, ಅನೇಕ ಸಮಾಜಮುಖಿ ಯೋಜನೆಗಳ ರೂವಾರಿಯಾಗಿ, ಚಿಂತಕರಾಗಿ, ೫೮ನೆಯ ಅಖಿಲಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿ, ಹೆಸರಾಂತ ಸಾಹಿತಿಗಳಾಗಿ, ಆಧುನಿಕ ವಚನಕಾರರಾಗಿ, ಮೇರು ಸಂಶೋಧಕರಾಗಿ, ಸಮಾಜಸೇವಕರಾಗಿ, ಪತ್ರಿಕೆಯ ಸಂಪಾದಕರಾಗಿ, ಹೀಗೆ ಬಹುಮುಖಿ ಕೊಡುಗೆಯನ್ನು ನೀಡಿದ್ದಾರೆ ಡಾ.ಸಿದ್ಧಯ್ಯಪುರಾಣಿಕರು.

"ಕವಿದೇಹಬಿಟ್ಟಾನು, ಕವಿತೆ ಅಮರ" ಎನ್ನುವಂತೆ, ಡಾ.ಸಿದ್ಧಯ್ಯಪುರಾಣಿಕರವರು ಸ್ವತಂತ್ರಧೀರ ಸಿದ್ದೇಶ್ವರ ಅಂಕಿತನಾಮದಲ್ಲಿ ರಚಿಸಿರುವ ೫೨೫ ಆಧುನಿಕ ವಚನಗಳನ್ನು ಒಳಗೊಂಡಿರುವ "ವಚನೋದ್ಯಾನ"ವನ್ನು ಶ್ರೀಗಿರಿಪ್ರಕಾಶನ ೧೯೭೭ರಲ್ಲಿ ಮೊದಲ ಸಲ ಪ್ರಕಟಿಸಿದ್ದರೂ, ೨೦೨೨ರ ಮತ್ತು ಮುಂಬರುವ ವರ್ಷಗಳಲ್ಲಿ ಕೂಡ ಈ ಕೃತಿಯಲ್ಲಿರುವ ಮಾನವೀಯ ಮೌಲ್ಯಗಳು ಪ್ರಸ್ತುತವಾಗುತ್ತವೆ ಎಂದು ಡಾ.ಉಷಾದೇವಿ ಉದಯ ಹಿರೇಮಠರವರು, ಈ ಕೃತಿ "ವಚನೋದ್ಯಾನ ಸಾಂಸ್ಕೃತಿಕ ಅಧ್ಯಯನ" ಮೂಲಕ ತಿಳಿಸಿಕೊಟ್ಟಿದ್ದಾರೆ. ಅತ್ಯಂತ ಸರಳ ವ್ಯಕ್ತಿತ್ವದವರಾದ, ವಿನಯ ಮತ್ತು ವಿವೇಕದ ಸಂಗಮವಾಗಿರುವ ಡಾ.ಉಷಾದೇವಿ ಹಿರೇಮಠರವರು ನಾಡು–ನುಡಿಗಾಗಿ ನಿರಂತರವಾಗಿ ಅನನ್ಯ ಸೇವೆಯನ್ನು ಸಲ್ಲಿಸುತ್ತಿರುವುದು ಕನ್ನಡಿಗರಿಗೆ ಹೆಮ್ಮೆಯ ವಿಷಯವಾಗಿದೆ.

ವಚನೋದ್ಯಾನ ಕುರಿತು ಅನೇಕ ಕೃತಿಗಳು, ಲೇಖನಗಳು ಪ್ರಕಟವಾಗಿವೆ. ಆದರೆ ಡಾ.ಉಷಾದೇವಿಯವರು ಆಳವಾದ ಅಧ್ಯಯನ ಮಾಡಿ, ರಚಿಸಿರುವ ವಚನೋದ್ಯಾನ–ಸಾಂಸ್ಕೃತಿಕ ಅಧ್ಯಯನ, ಅನೇಕ ವಿಶೇಷತೆಗಳನ್ನು ಒಳಗೊಂಡಿದೆ. ವಚನೋದ್ಯಾನ ಕುರಿತು ಡಾ.ಹಾಮಾನಾಯಕರು ಹೇಳಿರುವುದು ಇಲ್ಲಿ ನೆನಪಾಗುತ್ತದೆ.

"ವ್ಯಂಗ್ಯ ವಿಡಂಬನೆಗಳಿಲ್ಲ, ಬೇಡಿಕೆ ಪ್ರಾರ್ಥನೆಗಳಿಲ್ಲ, ಚುಚ್ಚುವುದು ತಿವಿಯುವುದು ಇಲ್ಲ, ಮೈದಡವುವ ಮಾತೃವಾತ್ಸಲ್ಯವಿದೆ. ಗಹಗಹಿಸುವ ನಗುವಿಲ್ಲ, ಮೃದುಮಂದಹಾಸವಿದೆ; ವೈಭವಕ್ಕಾಗಿ ವರ್ಣನೆಯಿಲ್ಲ, ವಸ್ತುಸ್ಥಿತಿಗೆ ವಿಶೇಷಣಗಳಿವೆ; ಲೋಕವನ್ನುತಿಳಿಯುವ ಹೆಚ್ಚುಗಾರಿಕೆಯಿಲ್ಲ; ತನ್ನನ್ನು ತಿಳಿಯುವ ಹುಚ್ಚಿದೆ. ಇದು ಚಮತ್ಕಾರದ ಕಾವ್ಯವಲ್ಲ ಸಾಕ್ಷಾತ್ಕಾರದ ಭಾಷ್ಯ"

ಡಾ.ಉಷಾದೇವಿ ಉದಯ ಹಿರೇಮಠರವರ ವಚನೋದ್ಯಾನ–ಸಾಂಸ್ಕೃತಿಕ ಅಧ್ಯಯನ ಕೃತಿಗೆ ಡಾ.ಸಿದ್ಧಯ್ಯ ಪುರಾಣಿಕರ ಮಾತೃ ವಾತ್ಸಲ್ಯ, ಹೆಮ್ಮೆ ಮತ್ತು ಸಂತೋಷದ ಆಶೀರ್ವಾದ ದೊರೆತಿದೆ ಎಂದು ನಾನಾದರೂ ಭಾವಿಸುತ್ತೇನೆ. ಈ ಕೃತಿ ಇಂಗ್ಲೀಷ್ ಭಾಷೆಯಲ್ಲಿ ಕೂಡ ಪ್ರಕಟವಾಗಿ ದೇಶವಿದೇಶಗಳಲ್ಲಿರುವ ಓದುಗರನ್ನು ತಲುಪಬೇಕು. ಸಹೋದರಿಯವರಾದ ಡಾ.ಉಷಾದೇವಿಯವರಿಂದ ಮುಂಬರುವ ದಿನಗಳಲ್ಲಿ ಕನ್ನಡ ಸಾರಸ್ವತ ಲೋಕಕ್ಕೆ ಹೆಚ್ಚು ಕೊಡುಗೆ ದೊರೆಯಲಿ, ಸಹೃದಯ ಓದುಗರು ಅವರಿಗೆ ಪ್ರೋತ್ಸಾಹ ನೀಡಲಿ ಎಂದು ಆಶಿಸುತ್ತೇನೆ.

ಡಾ. ಉದಯ್ ಶಂಕರ್ ಪುರಾಣಿಕ್
ಅಂತರ್ ರಾಷ್ಟ್ರೀಯ ಸೈಬರ್ ವಿಜ್ಞಾನಿಗಳು,
ಬೆಂಗಳೂರು

ISBN : 978-93-88166-03-4
978-93-88166-03-4

Scanned with OKEN Scanner